# ದಿ.23 ರಂದು ದತ್ತಿನಿಧಿ ಕಾರ್ಯಕ್ರಮ

**ಮುಂಡರಗಿ :** ಅವ್ವ ಸೇವಾ ಟ್ರಸ್ಟ ಈಗಾಗಲೇ ಸಭಾಪತಿ ಬಸವರಾಜ ಹೊರಟ್ಟಿಯವರ ನೇತೃತ್ವದಲ್ಲಿ ಸಮಾಜಮುಖಿ ಕೆಲಸ ಮಾಡುವ ಮೂಲಕ ತನ್ನದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದೆ ಎಂದು ಮುಂಡರಗಿ ಜಗದ್ಗುರು ಅನ್ನದಾನೀಶ್ವರ ಶ್ರೀಗಳು ಹೇಳಿದರು.

ಅವರು ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಅವ್ವ ಸೇವಾ ಟ್ರಸ್ಟ ಸಂಚಾಲಕ ಡಾ. ಬಸವರಾಜ ಧಾರವಾಡ ಮಾತನಾಡಿ, ಸಭಾಪತಿ ಬಸವರಾಜ ಹೊರಟ್ಟಿ ಅವರು ಹುಟ್ಟು ಹಾಕಿದ ಅವ್ವ ಸೇವಾ ಟ್ರಸ್ಟ ಈಗಾಗಲೇ ಕಳೆದ ದಶಕಗಳಿಂದ ಹತ್ತು ಹಲವು ವಿಧಾಯಕ ಕಾರ್ಯಕ್ರಮಗಳನ್ನು ಸಮಾಜಮುಖಿಯಾಗಿ ಆಯೋಜಿಸುವ ಮೂಲಕ ಅವ್ವನ ಹಾಗೂ ಹೆತ್ತವರ ಮಹತ್ವದ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ತಮ್ಮ ತಾಯಿ ಗುರವ್ವನ ಸ್ಮರಣಾರ್ಥ ಮುಂಡರಗಿಯ ಶ್ರೀ ಅನ್ನದಾನೀಶ್ವರ ಮಠದಲ್ಲಿ ಸ್ಥಾಪಿಸಿದ ದತ್ತಿನಿಧಿ ಕಾರ್ಯಕ್ರಮ ದಿ.23 ರಂದು ಬೆಳಿಗ್ಗೆ 10.30ಕ್ಕೆ ಮುಂಡರಗಿ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠದ ಶಿವಾನುಭವ ಸಮಿತಿಯವರು ಅವ್ವ ಸೇವಾ ಟ್ರಸ್ಟ ಸಹಯೋಗದಲ್ಲಿ ಆಯೋಜಿಸಲಾಗಿದೆ.

ಬಸವರಾಜ ಹೊರಟ್ಟಿಯವರು ತಮ್ಮ ತಾಯಿ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಸ್ಥಾಪಿಸಿದ ಅವ್ವ ಸೇವಾ ಟ್ರಸ್ಟ ಅನೇಕರ ಬಾಳಿಗೆ ಬೆಳಕಾಗಿದೆ.



ತಮ್ಮ ಹುಟ್ಟೂರಾದ ಯಡಹಳ್ಳಿಯಲ್ಲಿ 7 ಎಕರೆ ಜಮೀನನ್ನು ಸರಕಾರಿ ಶಾಲೆಗೆ ದಾನ ನೀಡಿ ದೇಶದಲ್ಲಿಯೇ ಮಾದರಿ ಶಾಲೆ ನಿರ್ಮಿಸಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಉತ್ಕೃಷ್ಟ ಶಿಕ್ಷಣ ಸಿಗುವಂತೆ ಮಾಡಿದ್ದಾರೆ. ಪ್ರತಿ ವರ್ಷ ಅಂಧ ಅನಾಥರಿಗೆ, ಪ್ರತಿಭಾವಂತರಿಗೆ ಅಭಯ ಹಸ್ತ ಚಾಚಿ ನೆರವು ನೀಡುತ್ತಿದ್ದಾರೆ.

ಕೃಷಿ, ಪರಿಸರ, ಆರೋಗ್ಯ, ಶಿಕ್ಷಣ, ಹೆಣ್ಣುಮಕ್ಕಳು ಹೀಗೆ ಹತ್ತಾರು ಮಹತ್ವದ ಸಂಗತಿಗಳ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ನೂರಾರು ಮಕ್ಕಳನ್ನು ದತ್ತು ಪಡೆದು ಅವರ ಶಿಕ್ಷಣಕ್ಕೆ ನೆರವು ಕಲ್ಪಿಸಿದ್ದಾರೆ. ಹೆತ್ತವರ ಮಹತ್ವ ಕುರಿತು ಮಕ್ಕಳಲ್ಲಿ ಜಾಗೃತಿ ಮೂಡಿಸಲು ಬೆಳಗಾವಿ ವಿಭಾಗ ಮಟ್ಟದಲ್ಲಿ ನಿಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಲ್ಲಿಯ ಕೆಲವು ಮಹತ್ವದ ನಿಬಂಧಗಳನ್ನು ಆಯ್ಕೆ ಮಾಡಿ ಮಕ್ಕಳ ಮನದಾಳದಲ್ಲಿ ಅವ್ವ ಶಿರೋನಾಮೆ ಹೊತ್ತ ಅಮೂಲ್ಯ ಗ್ರಂಥವನ್ನು ಲೋಕಾರ್ಪಣೆ ಮಾಡಲಾಗಿದೆ. ಹೀಗೆ ಎಲ್ಲ ವರ್ಗಕ್ಕೂ ಮತ್ತು ವಿವಿಧ ಕ್ಷೇತ್ರಕ್ಕೂ ಅವ್ವ ಸೇವಾ ಟ್ರಸ್ಟ ತನ್ನದೇ ಆದ ಅಳಿಲು ಸೇವೆಯನ್ನು ಸಲ್ಲಿಸುತ್ತಾ ಬರುತ್ತಿದೆ ಎಂದರು.

ಹೆತ್ತವರ ಮಹತ್ವದ ಕುರಿತು ಪ್ರತಿವರ್ಷ ಜಾಗೃತಿ ಮೂಡಿಸಲು ಅನ್ನದಾನೀಶ್ವರ ಮಠದಲ್ಲಿ ರೂ.1,25,000ನೀಡಿ ದತ್ತಿನಿಧಿ ಸ್ಥಾಪಿಸಲಾಗಿದೆ. ಆ ಮೂಲಕ ವಿಧಾಯಕ ಕಾರ್ಯಕ್ರಮಗಳನ್ನು ಆಯೋಜಿಸಲು ಅವಕಾಶ ಕಲ್ಪಿಸಿದ್ದಾರೆ. ಆ ಹಿನ್ನೆಲೆಯಲ್ಲಿ ಇದೇ 23ರಂದು ಶ್ರೀಮಠದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅವ್ವನ ಕುರಿತು ಚಿಂತನ ಮಂಥನ, ಸನ್ಮಾನ ಮುಂತಾದ ವಿಧಾಯಕ ಕಾರ್ಯಕ್ರಮಗಳು ಜರುಗಲಿವೆ.

ಕಾರ್ಯಕ್ರಮದ ಸಾನಿಧ್ಯವನ್ನು ಜಗದ್ಗುರು ನಾಡೋಜ ಡಾ.ಅನ್ನದಾನ ಶ್ರೀಗಳು ವಹಿಸಲಿದ್ದಾರೆ. ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರ ಘನ ಉಪಸ್ಥಿತಿ ಇರಲಿದೆ. ಮುಖ್ಯ ಅತಿಥಿಗಳಾಗಿ ಹರಪನಹಳ್ಳಿ ಶಾಸಕಿ ಲತಾದೇವಿ ಮಲ್ಲಿಕಾರ್ಜುನ, ಅವ್ವ ಸೇವಾ ಟ್ರಸ್ಟ ಕಾರ್ಯದರ್ಶಿ ಶಶಿ ಸಾಲಿ, ಅವ್ವ ಸೇವಾ ಟ್ರಸ್ಟನ ಗದಗ ಸಂಚಾಲಕ ಡಾ.ಬಸವರಾಜ ಧಾರವಾಡ ಲಿಂಗನಾಯಕನ ಹಳ್ಳಿಯ ಡಾ.ನಿರಂಜನ ದೇವರು, ನಿವೃತ್ತ ಪ್ರಾಚಾರ್ಯ ಎಸ್.ಬಿ. ಕರಿಭರಮಗೌಡ್ರ ಮುಂತಾದವರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠದ ಆಡಳಿತಾಧಿಕಾರಿ ಡಾ.ಬಿ.ಜಿ. ಜವಳಿ ನಿವೃತ್ತ ಮುಖ್ಯೋಪಾಧ್ಯಾಯ ಎಸ್. ಎಂ. ಅಗಡಿ, ನಿವೃತ್ತ ಪ್ರಾಚಾರ್ಯ ಎಸ್. ಎಸ್. ಕಲ್ಮಠ, ಎಸ್. ಎಸ್. ಗಡ್ಡದ ಮುಖ್ಯೋಪಾಧ್ಯಾಯ ಎಂ. ಎಚ್. ಪೂಜಾರ, ಮೈಲಾರಪ್ಪ ಕಲಕೇರಿ ಮುಂತಾದವರು ಭಾಗವಹಿಸಿದ್ದರು.

# ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸಂಸ್ಮರಣ ದತ್ತಿನಿಧಿ ಕಾರ್ಯಕ್ರಮ ನಾಳೆ



ಮುಂಡರಗಿ, ಏ.21. ಸಭಾಪತಿ ಬಸವರಾಜ ಹೊರಟ್ಟಿ ಅವರು ತಮ್ಮ ತಾಯಿ ಗುರವ್ವನ ಸ್ಮರಣಾರ್ಥ ಮುಂಡರಗಿಯ ಅನ್ನದಾನೀಶ್ವರ ಮಠದಲ್ಲಿ ಸ್ಥಾಪಿಸಿದ ದತ್ತಿನಿಧಿ ಕಾರ್ಯಕ್ರಮ ಏ.23 ರಂದು ಬೆಳಿಗ್ಗೆ 10.30ಕ್ಕೆ ಜ.ಅನ್ನದಾನೀಶ್ವರ ಸಂಸ್ಥಾನಮಠದ ಶಿವಾನುಭವ ಸಮಿತಿಯಿಂದ ಅವ್ವ ಸೇವಾ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಲಾಗಿದೆ.

ಸಾನ್ನಿಧ್ಯವನ್ನು ಜಗದ್ಗುರು ನಾಡೋಜ ಡಾ.ಅನ್ನದಾನ ಶ್ರೀಗಳು ವಹಿಸಲಿದ್ದಾರೆ. ವಿಧಾನ ಪರಿಷತ್ತಿನ ಸಭಾಪತಿಗಳಾದ ಬಸವರಾಜ ಹೊರಟ್ಟಿ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಹರಪನಹಳ್ಳಿ ಶಾಸಕರಾದ ಶ್ರೀಮತಿ ಲತಾದೇವಿ ಮಲ್ಲಿಕಾರ್ಜುನ, ಅವ್ವ ಸೇವಾ ಟ್ರಸ್ಟ ಕಾರ್ಯದರ್ಶಿ ಶಶಿ ಸಾಲಿ, ಅವ್ವ ಸೇವಾ ಟ್ರಸ್ಟನ ಗದಗ ಸಂಚಾಲಕ ಡಾ.ಬಸವರಾಜ ಧಾರವಾಡ, ಲಿಂಗನಾಯಕನ ಹಳ್ಳಿಯ ಡಾ.ನಿರಂಜನ ದೇವರು, ನಿವೃತ್ತ ಪ್ರಾಚಾರ್ಯ ಎಸ್.ಪಿ. ಕರಿಭರಮಗೌಡ್ರ ಮುಂತಾದವರು ಭಾಗವಹಿಸಲಿದ್ದಾರೆ.

ಈ ಅರ್ಥಪೂರ್ಣ ಹಾಗೂ ಭಾವನಾತ್ಮಕ ಕಾರ್ಯಕ್ರಮಕ್ಕೆ ಸರ್ವರೂ ಆಗಮಿಸಲು ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದ ಆಡಳಿತಾಧಿಕಾರಿ ಡಾ.ಬಿ.ಜಿ. ಜವಳಿ ವಿನಂತಿಸಿದ್ದಾರೆ.